ತಮ್ಮದೇ ಕವಿತೆಗಳನ್ನು ಕೇಳಿಸಿಕೊಂಡೂ ಕಣ್ಣು ತೆರೆಯಲಿಲ್ಲ. ಬಹುಶಃ ಕಾವ್ಯವನ್ನೇ ನಂಬಿಕೊಂಡಿದ್ದ ಅವರ ಆತ್ಮವೂ ಕೂಡಾ ಆ ಹೊತ್ತಲ್ಲಿ ಒಳಗೊಳಗೇ ಒಂದು ಸಣ್ಣ ಮಂದಹಾಸ ಬೀರಿರಬಹುದು. ಅಣು ರೇಣು ತೃಣ ಕಾಷ್ಠಗಳಲ್ಲೂ ಕವಿತೆಯನ್ನೇ ಕಾಣುತ್ತಿದ್ದ ಮತ್ತು ಕವಿತೆಯೊಂದನ್ನು ಬಿಟ್ಟು ಬೇರೇನನ್ನೂ ನಂಬದಿದ್ದ ಮಂಜುನಾಥ್ ಹಾಗೂ ಅವರನ್ನೇ ನಂಬಿದ್ದ ಅವರ ಮಡದಿ ಮತ್ತು ಮಗಳು ಎಲ್ಲರಿಗೂ ಕವಿತೆ ತಣ್ಣಗೆ ಕೈ ಕೊಟ್ಟಿತ್ತು. ಆನಂತರ ಅವರಿಗೆ ಅಳವಡಿಸಲಾಗಿದ್ದ ಜೀವ ಉಳಿಸುವ ಉಪಕರಣಗಳನ್ನು ತೆಗೆಯಲಾಯಿತು ಮತ್ತು ಜೀವಯಾನದ ಕವಿ ಎಸ್.ಮಂಜುನಾಥ್ ತೀರಿಹೋಗಿದ್ದಾರೆಂದು ಘೋಷಿಸಲಾಯಿತು.

ತೀರಿಹೋಗುವ ಸುಮಾರು ಮೂರು ವಾರಗಳ ಹಿಂದೆ ಮಂಜುನಾಥ್ ಗಣರಾಜ್ಯೋತ್ಸವದ ಅಂಗವಾಗಿ ನಡೆಯುವ ಸರ್ವಭಾಷಾ ಕವಿಗೋಷ್ಠಿಗೆ ಕನ್ನಡವನ್ನು ಪ್ರತಿನಿಧಿಸಿ ವಾರಣಾಸಿಗೆ ಹೋಗಿದ್ದರು. ಹೋಗುವ ಮೊದಲು ಅವರಿಗೆ ಅಲ್ಲಿಗೆ ಹೋಗುವುದೋ ಬೇಡವೋ ಎಂಬ ಅಳುಕೂ ಇತ್ತು. 'ಹೋಗಲೇಬೇಕಾ' ಎಂದು ಎರಡು ಮೂರು ಬಾರಿ ಕೇಳಿದ್ದರು. ಕವಿಗಳಿಗೆ ಸಹಜವಾಗಿಯೇ ಇರುವ ಸಂಕೋಚ ಎಂದು ತಿಳಿದುಕೊಂಡ ನಾವು ಪರವಾಗಿಲ್ಲ ಎಂದು ಒತ್ತಾಯಿಸಿದ್ದವು. ಮಡದಿ ಮತ್ತು ಮಗಳ ಜೊತೆ ಕಾಶಿಯಾತ್ರೆಗೆ ಹೋಗಿ ಬನ್ನಿ ಎಂದು ಕಳಿಸಿದ್ದೆವು. ತೀವ್ರ ಚಳಿ, ಹಲ್ಲು ನೋವು ಮತ್ತು ಆಹಾರದ ವ್ಯತ್ಯಾಸದಿಂದಾಗಿ ಸಾಕಷ್ಟು ಬೆಚ್ಚನೆಯ ಉಡುಪುಗಳನ್ನು ಹೊತ್ತೊಯ್ದಿದ್ದರೂ ಮಂಜುನಾಥ್ ಬಳಲಿಬಿಟ್ಟಿದ್ದರು. ತಮ್ಮ ಆರೋಗ್ಯದ ವಿಷಮ ಸ್ಥಿತಿಯಲ್ಲೂ ಅವರು ಕವಿತೆಯನ್ನು ಬಲವಾಗಿ ನಂಬಿದ್ದರು. ಅವರು ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿರುವಾಗ ಅವರ ಹದಿಹರೆಯದ ಮಗಳು ಮೃಣಾಲಿನಿ ಆತಂಕವನ್ನು ತೋರಿಸದೆ ಅಮ್ಮನನ್ನು ಅಂಟಿಕೊಂಡು ಆಸ್ಪತ್ರೆಯ ಬೆಂಚಿನಲ್ಲಿ ಕುಳಿತುಕೊಂಡಿದ್ದಳು. ಅವಳನ್ನು ಸ್ವಲ್ಪ ಗೆಲುವುಗೊಳಿಸೋಣ ಎಂಬ ಆಸೆಯಿಂದ, 'ವಾರಣಾಸಿಯ ಯಾತ್ರೆ ಹೇಗಿತ್ತು ಮಗೂ?' ಎಂದು ಪೆದ್ದು ಪೆದ್ದಾಗಿ ಕೇಳಿದ್ದೆ.

'ಹೋಗಿದ್ದಾಗ ಚಂದ ಇತ್ತು ಅಂಕಲ್. ಆದರೆ, ಈಗ ಹೀಗೆ ಆದ ಮೇಲೆ ಎಲ್ಲ ಕೆಟ್ಟದಾಗಿ ಕಾಣಿಸ್ತಿದೆ' ಎಂದು ಅವಳು ಅಂದಳು.

ಆಕೆ ಮಂಜುನಾಥರ ಜೀವದಂತಹ ಮಗಳು. ಆಕೆ 'ಮಗಳು ಸೃಜಿಸಿದ ಸಮುದ್ರ' ಎಂಬ ಅವರ ಕವಿತೆಯ ನಾಯಕಿ. ಸಮುದ್ರವನ್ನೇ ನೋಡದಿದ್ದವಳು ನಡುಮನೆಯೊಳಗೆ ಕಾಗದದ ದೋಣಿ ಮಾಡಿಟ್ಟು ಎಲ್ಲರ ಎದೆಯೊಳಗೆ ಅಲೆಗಳನ್ನು ಎಬ್ಬಿಸಿದವಳು. ಈಗ ಆಕಾಶದಲ್ಲಿ ವಿಮಾನವನ್ನೇರಿ ಮೋಡಗಳ ಮೇಲಿಂದ ಹಾರಿ ಕಾಶಿಯನ್ನೂ ಗಂಗೆಯನ್ನೂ ನೋಡಿಬಂದವಳು ಏನೆಂದು ಹೇಳಲಾಗದೆ ಕಂಗಾಲಾಗಿದ್ದವಳು. ಈ ಮಗುವಿಗೆ ಏನೆಂದು ಉತ್ತರಿಸಲಿ ಎಂದು ಗೊತ್ತಾಗದೆ ನಾನು ತಲೆ ತಗ್ಗಿಸಿದ್ದೆ. 'ನೀವು ವೃಥಾ ಆತಂಕಗೊಳ್ಳಬೇಡಿ. ಮಂಜುನಾಥ್ ವಾಪಸ್ಸು ಬರುತ್ತಾರೆ' ಎಂದು ಅವರ ಮಡದಿ ಸವಿತಾ ಸಮಾಧಾನ ಹೇಳಿದ್ದರು.

★★★

'ಹಕ್ಕಿಪಲ್ಟಿ', 'ಬಾಹುಬಲಿ', 'ನಂದಬಟ್ಟಲು', 'ಮೌನದ ಮಣಿ', 'ಕಲ್ಲ ಪಾರಿವಾಳಗಳ ಬೇಟ', 'ಮಗಳು ಸೃಜಿಸಿದ ಸಮುದ್ರ', 'ಜೀವಯಾನ', 'ಬೊಗಸೆ ಜಲ ಒಂದು ಬೀಜಕ್ಕಾಗಿ...' ಇವು ಮಂಜುನಾಥ್ ಅವರ ಪ್ರಕಟಿತ ಕವನ ಸಂಗ್ರಹಗಳು. ಅವರ ತಾವೋ ಕವಿತೆಗಳ ಅನುವಾದದ ಪುಸ್ತಕ – 'ಸುಮ್ಮನಿರುವ ಸುಮ್ಮಾನ'.

ಅವರೊಂದಿಗೆ ಈ ಹಿಂದೆ ನಡೆಸಿದ ಸಾಹಿತ್ಯಿಕ ಸಂವಾದ ಮುಂದಿನ ಪುಟಗಳಲ್ಲಿದೆ.